## ಕಥೋಪದೇಶ




ಒಮ್ಮೆ ರಾಜ ಜನಕನಿಗೆ ಒಂದು ಕನಸಾಯಿತು. ಅದರಲ್ಲಿ ಶತ್ರುರಾಜನು ಇವನನ್ನು ಸೋಲಿಸಿ ಸೆರೆಹಿಡಿದು ಕರೆದುಕೊಂಡು ಹೋದನು. ಅವನ ಒಡವೆ ವಸ್ತ್ರಗಳನ್ನೆಲ್ಲ ಕಿತ್ತುಕೊಂಡು ಬಿಟ್ಟನು. ಜನಕನು ಬರಿ ಕೌಪೀನಧಾರಿಯಾಗಿ ಶತ್ರುರಾಜನ ಅರಮನೆಯಿಂದ ಹೊರಟನು. ಆಶ್ರಯಕ್ಕಾಗಿ ಯಾವುದೊ ಮನೆಗೆ ಹೋಗಬೇಕೆಂದು ಅವನು ಯೋಚಿಸುತ್ತಿರುವಾಗ, ರಾಜನ ಅರಮನೆಯಿಂದ ಜೋರಾಗಿ ಘೋಷಣೆ ಕೇಳಿಬಂತು: "ಜನಕ ರಾಜನಿಗೆ ಯಾರಾದರೂ ಆಶ್ರಯ ಆಹಾರ ನೀಡಿದರೆ ಅವರ ತಲೆ ಕತ್ತರಿಸಲಾಗುವುದು."

ಜನಕನು ಭಿಕ್ಷುಕನಂತೆ ನಡೆದುಕೊಂಡು ನೆರೆರಾಜ್ಯವನ್ನು ತಲುಪಿದನು. ಹಸಿವನ್ನು ತಾಳಲಾರದೆ ಒಂದು ಛತ್ರಕ್ಕೆ ಹೋಗಿ ಆಹಾರಕ್ಕಾಗಿ ಬೇಡಿದನು. ಮಿಕ್ಕ ಅನ್ನವನ್ನು ಒಂದು ಎಲೆಯಲ್ಲಿ ಅವನಿಗೆ ಕೊಡಲಾಯಿತು. ಅದನ್ನು ಅವನು ತಿನ್ನಬೇಕು ಅನ್ನುವಷ್ಟರಲ್ಲಿ ಒಂದು ನಾಯಿ ಬಂದು ಆಕ್ರಮಣ ಮಾಡಿತು, ಅನ್ನ ಕೆಳಗೆ ಬಿತ್ತು. ಜನಕನು ತುಂಬ ದುಃಖದಿಂದ "ಓ ಭಗವಂತನೆ, ನನಗೇಕೆ ಈ ಸ್ಥಿತಿ ಬಂತು?" ಎಂದು ಗೋಳಾಡಿದನು.

ಅಷ್ಟರಲ್ಲಿ ಅವನಿಗೆ ಎಚ್ಚರವಾಯಿತು. ಕನಸಿನ ಪರಿಣಾಮವಾಗಿ ಅವನು ಸುಸ್ತಾಗಿದ್ದನು, ದೇಹ ಬೆವತಿತ್ತು. ಈಗ ಅವನಿಗೆ 'ಇದು' ಸತ್ಯವೊ ಅಥವಾ 'ಅದು' ಸತ್ಯವೊ ಎಂಬ ಸಂಶಯ ಬಂದಿತು. ಎಲ್ಲರನ್ನೂ ವಿಚಾರಿಸತೊಡಗಿದ, ಯಾರೂ ಉತ್ತರಿಸದಾದರು. ಕೊನೆಗೆ ಅಷ್ಟಾವಕ್ರ ಮುನಿ ಬಂದನು. ಜನಕ ಅವನನ್ನೂ ಅದೇ ಪ್ರಶ್ನೆ ಕೇಳಿದನು. ಅವನು ಉತ್ತರಿಸಿದ:

"ಜನಕ, ನೀನು ಭಿಕ್ಷುಕನಾಗಿದ್ದಾಗ ಈ ಅರಮನೆ, ರಾಜವೈಭವಗಳೆಲ್ಲ ಇರಲಿಲ್ಲ. ನೀನು ಈಗ ರಾಜನಾಗಿರುವಾಗ ಆ ದಾರಿದ್ರ್ಯವಾಗಲಿ ಛತ್ರವಾಗಲಿ ಇಲ್ಲ. ಆದರೆ 'ನೀನು' ಮಾತ್ರ ಎರಡೂ ಅವಸ್ಥೆಗಳಲ್ಲಿದ್ದೆ. ಆದ್ದರಿಂದ ಕಾಲವಶವಾದ ಎಲ್ಲ ಅವಸ್ಥೆಗಳೂ ಅಸತ್ಯ, ಕಾಲಾತೀತವಾದ ಆತ್ಮವೊಂದೇ ಸತ್ಯ." ಅದನ್ನು ಕೇಳಿ, ಜನಕನು ಎಲ್ಲದರಿಂದಲೂ ನಿರ್ಲಿಪ್ತನಾಗಿ ಆತ್ಮಾನುಸಂಧಾನದಲ್ಲಿ ನಿರತನಾದನು. ◆